
ಕವಿತೆ



ಎಚ್.ಎಸ್. ವೆಂಕಟೇಶಮೂರ್ತಿ

ಕಲೆ: ಎಸ್.ವಿ. ಹೂಗಾರ್



# ಊರುಗೋಲಿಗೆ

ಕಡೆವರೆಗು ಕರೆದೊಯ್ಯು ಊರುಗೋಲೆ।
ಉಳಿದದ್ದು ಸಿಗಬಹುದು
ಕಳೆದ ಮೇಲೆ॥

ಒಡನಾಡಿದವರಿಲ್ಲ
ಈಗ ಜೊತೆಗೆ
ಕೊನೆಯಾವುದೋ ಕಾಣೆ
ಕಳೆದ ಕತೆಗೆ॥

ಕಾಲು ಸೋತಿವೆ. ಕರುಣಿ
ನೀನೆ ಹೇಳು
ಕಡೆಯೂರನೆಂದು ಮು
ಟ್ಟುವುದು ಬಾಳು॥

ಕಾಣುವೆನೆ ಮತ್ತೆ ಕಳ
ಕೊಂಡ ಮುಖವ
ತಾರೆ ಮಿನುಗುವ ನೀಲಿ
ಕಣ್ಣ ಕೊಳವ॥

ಅಥವ ಆ ಕೊನೆಯೂರು
ಬರಿಯ ಬಯಲೆ?
ಸಾಲುಗಳು ಮುಳುಗಿದ
ಖಾಲಿ ಹಾಳೆ?॥